Bapuji Education Association (R)

**Bapuji Institute of Engineers and Technology, Davanagere**
**In association with IQAC**

Inauguration of Skyscend and MOU exchange
Hosted by Dept. Of Computer Science and Engineering

**YOUR PRESENCE IS**

# MOST VALUED

ON THE OCCASION OF THE OPENING OF OUR NEW OFFICE AT **BIET CAMPUS, DAVANAGERE.**

FRIDAY

## 3rd DEC 2021

TIME - 4:00 - 5:30 p.m.

skyscend
Seamless Commerce

HQ: Atlanta, Georgia, USA
Offices in: India & Canada.

## INAUGURATION BY

**Sri Steve Rouch**
Chairman, Skyscend

## GUESTS OF HONOUR

**Sri Chayapathy Gangadarappa**
Founder & President, Skyscend

**Sri S Kumar Hadimani**
COO & CFO, Skyscend

**Sri H.B. Aravind**
Principal, BIET

**Sri Y. Vrushabhendrappa**
Director, BIET

**Sri Vinay Doggalli**
Head of India, Skyscend

## EVENT SCHEDULE

4:00 pm - Welcome Speech

4:05 pm - Inauguration

4:10 pm - Chief Guest Address

4:35 pm - Guest of Honour Speeches

5:00 pm - Offer Letters to BIET Students

5:10 pm - Presidential Address

5:25 pm - Vote of Thanks

skyscend
Seamless Commerce

Skyscend India Pvt Ltd
#224, 2nd Floor, SN Edifice,
Bannerghatta Road,
Bengaluru 560076
www.skyscend.com

# ಆಧುನಿಕ ವ್ಯವಸ್ಥೆಗಾಗಿ ಉದ್ಯಮ-ಶಿಕ್ಷಣ ಸಂಸ್ಥೆಗಳು ಜೊತೆಯಾಗಬೇಕು

## ಬಿಐಇಟಿಯಲ್ಲಿ ಸ್ಕೈಸೆಂಡ್ ಘಟಕ ಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿದ ಸ್ಟೀವ್ ರೂಚ್



ದಾವಣಗೆರೆ, ಡಿ. 3 - ವಿದ್ಯಾರ್ಥಿಗಳ ಕೌಶಲ್ಯವನ್ನು ಉದ್ಯಮಶೀಲತೆಗೆ ಪೂರಕವಾಗಿ ಬಳಸಲು ಅಮೆರಿಕದ ಸ್ಕೈಸೆಂಡ್ ಸಾಫ್ಟ್‌ವೇರ್ ಕಂಪನಿ ಹಾಗೂ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ (ಬಿ.ಐ.ಇ.ಟಿ.) ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ. ಇದೇ ವೇಳೆ ಸ್ಕೈಸೆಂಡ್‌ನ ನೂತನ ಘಟಕಕ್ಕೆ ಕಾಲೇಜಿನಲ್ಲಿ ಚಾಲನೆ ನೀಡಲಾಗಿದೆ.

ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಉದ್ಘಾಟನೆ ನೆರವೇರಿಸಿ ಮಾತನಾಡಿದ ಸ್ಕೈಸೆಂಡ್ ಅಧ್ಯಕ್ಷ ಸ್ಟೀವ್ ರೂಚ್, ಉದ್ಯಮ ಹಾಗೂ ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವದಿಂದಾಗಿ ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಯೋಜನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇಂಜಿನಿಯರಿಂಗ್ ಜೊತೆಗೆ ಉದ್ಯಮಗಳ ಕಾರ್ಯ ನಿರ್ವಹಣೆಯ ತಿಳುವಳಿಕೆ ಪಡೆಯಲಿದ್ದಾರೆ. ಇದರಿಂದ ಜಾಗತಿಕವಾಗಿ ಉದ್ಯೋಗ ಪಡೆಯಲು ನೆರವಾಗಲಿದೆ ಎಂದರು.

ತಮ್ಮ ಕಂಪನಿಯು ಕೃತಕ ಬುದ್ಧಿವಂತಿಕೆ, ಅನಲಿಟಿಕ್ಸ್, ಬ್ಲಾಕ್‌ಚೈನ್, ಕ್ಲೌಡ್ ಮುಂತಾದ ತಂತ್ರಜ್ಞಾನಗಳನ್ನು ಬಳಸಿಕೊಂಡು ಉದ್ಯಮಗಳ ನಿರ್ವಹಣೆಗೆ ನೆರವಾಗುವ ತಂತ್ರಾಂಶ ರೂಪಿಸುತ್ತಿದೆ ಎಂದವರು ಹೇಳಿದರು.

ಪ್ರಸಕ್ತ ಉದ್ಯಮಗಳಲ್ಲಿ ಎರಡು - ಮೂರು ದಶಕಗಳ ಹಳೆಯ ವ್ಯವಸ್ಥೆ ಇದೆ. ಇದನ್ನು ಆಧುನೀಕರಣಗೊಳಿಸಲು ಉದ್ಯಮ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಬ್ಬರೂ ಜೊತೆಯಾಗಿ ಕಾರ್ಯ ನಿರ್ವಹಿಸಬೇಕು ಎಂದು ರೂಚ್ ಹೇಳಿದ್ದಾರೆ.

ಅಮೆಜಾನ್ ಕಂಪನಿ ಯಾವುದೇ ಅಂಗಡಿ ಹೊಂದಿರದಿದ್ದರೂ ವಿಶ್ವಾದ್ಯಂತ ಸರಕುಗಳನ್ನು ಮಾರುತ್ತಿದೆ. ಓಲಾ ಕಂಪನಿ ಯಾವುದೇ ಕಾರು ಹೊಂದಿರದಿದ್ದರೂ ವಿಶ್ವದಾದ್ಯಂತ (3ನೇ ಪುಟಕ್ಕೆ)

Janathavani 4-12-2021

ಜನತಾವಾಣಿ 04-12-2021

# ಉದ್ಯಮ-ಶಿಕ್ಷಣ ಸಂಸ್ಥೆಗಳು ಜೊತೆಯಾಗಬೇಕು

(1ನೇ ಪುಟದಿಂದ) ಕ್ಯಾಬ್ ಸೇವೆ ಸಲ್ಲಿಸುತ್ತಿದೆ. ಇದು ತಂತ್ರಜ್ಞಾನ ಬದಲಾಗಿರುವ ರೀತಿಯನ್ನು ತೋರಿಸುತ್ತದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ನಿರ್ದೇಶಕ ವೈ. ವೃಷಭೇಂದ್ರಪ್ಪ, ಸ್ಕೈಸೆಂಡ್ ಜೊತೆ ಕೈ ಜೋಡಿಸಿರುವುದರಿಂದ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣ ಮುಗಿಸುವ ವೇಳೆಗೆ ಉದ್ಯಮಶೀಲತೆ ಹಾಗೂ ಕೌಶಲ್ಯದಲ್ಲಿ ತರಬೇತಿ ಪಡೆದು ಉದ್ಯೋಗಕ್ಕೆ ಅರ್ಹರಾಗಿರುತ್ತಾರೆ ಎಂದು ತಿಳಿಸಿದರು. ಉದ್ಯಮ ನಿರ್ವಹಿಸುವವರಿಗೆ ಸರಕುಗಳ ಪೂರೈಕೆಯಿಂದ ಹಿಡಿದು ಹಣಕಾಸಿನ ವಹಿವಾಟಿನವರೆಗೆ ಹಲವಾರು ಸಮಸ್ಯೆಗಳಿರುತ್ತವೆ. ವಿಶೇಷವಾಗಿ ಕೊರೊನಾ ಸಂದರ್ಭದಲ್ಲಿ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗಿವೆ. ಇಂತಹ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಾಫ್ಟ್‌ವೇರ್ ಕಂಪನಿಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಉತ್ತಮ ಸಾಫ್ಟ್‌ವೇರ್ ಅನ್ನು ಕೆಲವೇ ಬುದ್ಧಿವಂತ ವಿದ್ಯಾರ್ಥಿಗಳು ಸೇರಿಕೊಂಡು ಕಾಲೇಜಿನಲ್ಲಿ ರೂಪಿಸುತ್ತಾರೆ. ಆದರೆ, ಅವುಗಳು ಉದ್ಯಮಗಳ ಬಳಕೆಯಾಗುವಂತೆ ಮಾಡಲು ನೂರಾರು ಪರಿಣಿತರು ಬೇಕಾಗುತ್ತಾರೆ. ಅಂತಹ ಪರಿಣಿತರನ್ನು ರೂಪಿಸಲು ಉದ್ಯಮ - ಶಿಕ್ಷಣ ಸಹಭಾಗಿತ್ವ ನೆರವಾಗುತ್ತದೆ ಎಂದು ತಿಳಿಸಿದರು.

ಸ್ಕೈಸೆಂಡ್ ಸ್ಥಾಪಕ ಛಾಯಾಪತಿ ಗಂಗಾಧರಪ್ಪ ಮಾತನಾಡಿ, ದಾವಣಗೆರೆ ಈಗ ಸ್ಮಾರ್ಟ್ ಸಿಟಿ ಆಗಿದೆ. ಮುಂದೆ ಮೆಗಾ ಸಿಟಿ ಆಗಿ ಅಭಿವೃದ್ಧಿ ಆಗಬೇಕಿದೆ. ಈ ದಿಸೆಯಲ್ಲಿ ಉದ್ಯಮ ಹಾಗೂ ಶೈಕ್ಷಣಿಕ ಬೆಳವಣಿಗೆ ಮಹತ್ವದ್ದಾಗಿದೆ ಎಂದರು.

ಸ್ಕೈಸೆಂಡ್ ಸಿ.ಒ.ಒ. ಎಸ್. ಕುಮಾರ್ ಹಾದಿಮನಿ ಮಾತನಾಡಿ, ದಾವಣಗೆರೆಯಲ್ಲಿ ಕಂಪನಿಯ ಘಟಕ ತೆರೆದಿರುವುದು ದೊಡ್ಡ ಯೋಜನೆಯ ಆರಂಭವಾಗಿದೆ. ಇಲ್ಲಿನ ಪದವೀಧರರು ಉದ್ಯಮಕ್ಕೆ ಅಗತ್ಯ ಕೌಶಲ್ಯ ಪಡೆಯಲಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕಾಲೇಜಿನ ಹಲವಾರು ವಿದ್ಯಾರ್ಥಿಗಳಿಗೆ ಸ್ಕೈಸೆಂಡ್ ಕಂಪನಿ ವತಿಯಿಂದ ಉದ್ಯೋಗದ ಪ್ರಸ್ತಾಪ ಪತ್ರವನ್ನು ನೀಡಲಾಯಿತು. ವೇದಿಕೆಯ ಮೇಲೆ ಹಂಗಾಮಿ ಪ್ರಾಂಶುಪಾಲ ಡಾ. ಕೆ. ಸದಾಶಿವಪ್ಪ ಉಪಸ್ಥಿತರಿದ್ದರು.

ಡಾ. ಸಿ.ಆರ್. ನಿರ್ಮಲ ಸ್ವಾಗತಿಸಿದರೆ, ಡಾ. ಚೇತನ ಪ್ರಕಾಶ್ ವಂದಿಸಿದರು.

## ಸಮಾನತೆ ಹಾಗೂ ಸಮುದಾಯಕ್ಕಾಗಿ ಬಸವ ತತ್ವಕ್ಕೆ ಮೊರೆ ಹೋಗಿದ್ದೇನೆ : ಸ್ಟೀವ್ ರೂಚ್

ಬಸವ ತತ್ವದಲ್ಲಿರುವ ಸಮಾನತೆ, ಸಮುದಾಯದ ಒಳಿತು ಹಾಗೂ ಸಹಕಾರದ ಆಶಯಗಳನ್ನು ಮನಗಂಡು ಲಿಂಗ ದೀಕ್ಷೆ ಪಡೆಯುತ್ತಿರುವುದಾಗಿ ಸ್ಕೈಸೆಂಡ್ ಕಂಪನಿಯ ಅಧ್ಯಕ್ಷ ಸ್ಟೀವ್ ರೂಚ್ ಹೇಳಿದ್ದಾರೆ.

ಯಾವ ಕಾರಣಕ್ಕಾಗಿ ಲಿಂಗಾಯತ ಧರ್ಮವನ್ನು ಸ್ವೀಕರಿಸುತ್ತಿದ್ದೀರಿ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ಬಸವ ತತ್ವ ಧರ್ಮವೆಂದೇ ಭಾವಿಸಬೇಕಿಲ್ಲ. ಅದೊಂದು ಜೀವನ ಶೈಲಿಯ ಸಿದ್ಧಾಂತವಾಗಿದೆ ಎಂದರು.

ನಾವೆಲ್ಲರೂ ಸಮಾನರಾಗಿ ಹುಟ್ಟಿದ್ದೇವೆ. ಹೀಗಾಗಿ ಜಾತಿ, ಬಣ್ಣ, ಲಿಂಗದ ಆಧಾರದ ಮೇಲೆ ಪ್ರತ್ಯೇಕತೆ ಇರಬಾರದು. ಇಂತಹ ಸಮಾನತೆಯ ಸಿದ್ಧಾಂತ ಪ್ರತಿಪಾದಿಸುವ ಬಸವ ತತ್ವದಿಂದ ನಾನು ಆಕರ್ಷಿತನಾಗಿದ್ದೇನೆ ಎಂದು ತಿಳಿಸಿದರು.

ನಾನು ಜೀವನವಿಡೀ ಸಮಾನತೆಯ ತತ್ವದಲ್ಲೇ ಬದುಕಿದ್ದೇನೆ. ಕೋಪ ಬಿಡಬೇಕು, ಒಳಿತಿಗೆ ಉತ್ತೇಜನ ನೀಡಬೇಕು, ಸಮುದಾಯದಲ್ಲಿ ಪರಸ್ಪರ ಸಹಕಾರ ಇರಬೇಕು. ನಾವೆಲ್ಲ ಒಂದೇ ಸಮುದಾಯಕ್ಕೆ ಸೇರಿದವರು ಎಂಬ ಭಾವನೆ ಇದ್ದಾಗ ಮಾತ್ರ ಬಲವಾಗುತ್ತೇವೆ ಹಾಗೂ ಬೆಳೆಯುತ್ತೇವೆ ಎಂದವರು ಹೇಳಿದರು.

ಜಾತಿ, ಬಣ್ಣ, ಲಿಂಗವಷ್ಟೇ ಅಲ್ಲದೇ ಧರ್ಮದ ಭೇದವೂ ಅಳಿಯಬೇಕು. ಇದಕ್ಕಾಗಿ ವಿಶ್ವದ ಜನರು ಹೆಚ್ಚು ಹೆಚ್ಚಾಗಿ ಬಸವ ತತ್ವದ ಬಗ್ಗೆ ತಿಳಿಯಬೇಕು ಎಂದು ರೂಚ್ ಅಭಿಪ್ರಾಯ ಪಟ್ಟರು.